


ಎಡದಿಂದ ಬಲಕ್ಕೆ:

1. ಕೋಲಾಟಕ್ಕೆಂದು ಹೋದದ್ದೇ ಭಾರೀ ವಿಪತ್ತು ಬಂತು (3)
3. ಬಲವಿದ್ದರೇನು? ಎಲ್ಲ ತಡ, ನಿಧಾನ (3)
4. ಎಣ್ಣೆಯಲ್ಲಿ ಬೇಯಿಸಿದ್ದು ಬರೀ ಕಪ್ಪು (3)
6. ಪಾತ್ರಧಾರಿಯ ಬದುಕಿನಲ್ಲಿ ಬಿಸಿ ಬಿಸಿ ತೊಂದರೆ ಮೂರು (4)
7. ಹಗಲಲ್ಲಿ ಹಸ್ತ ಜೋಡಿಸಿದೊಡನೆ ಸೂರ್ಯನೇ ಪ್ರತ್ಯಕ್ಷ (4)
9. ಕೊಟ್ಟೊಡನೆ ಪಡೆಯಲೇಬೇಕೆಂಬ ಬಿಗಿ ನಿಯಮವೇ? (4)
11. ಅಪ್ಪನ ಕ್ರಮ ಒಂದೊಂದಕ್ಕೂ ಹೀಲಿಕೆಯೇ ಇಲ್ಲ (4)
15. ಸಜ್ಜಿಗೆಯನ್ನು ಹಂಚಿ ಒಳ್ಳೇ ಮನುಷ್ಯನಾದ (3)
16. ಹೊದಿಸಿದ್ದು ಸರಿ ಇಲ್ಲವಾದರೆ ಸುಟ್ಟುಹಾಕು (3)
17. ಜ್ಯೋತಿಯನ್ನಿರಿಸಲು ಇಂಥ ಭದ್ರ ಪೆಟ್ಟಿಗೆಯೇ? (3)

ಮೇಲಿಂದ ಕೆಳಕ್ಕೆ:

1. ಕಬ್ಬನ್ನು ಬೆಳೆದರೂ ಬರೀ ಕಣ್ಣೀರು (3)
2. ವಕ್ರ ವಕ್ರವಾಗಿ ನಡೆಯುತ್ತಾನೆ ಪೆದ್ದ (3)
3. ಎಲ್ಲವೂ ಉಚಿತ! ಎಂಥ ವಿಲಕ್ಷಣ (3)
5. ಮನದ ತುಂಬ ಏಕೆ ಇಂತಹ ದುಃಖ? (3)
6. ತರ್ಕ ಮಂಡಿಸಿದವರ ಧ್ವನಿ ಎಷ್ಟು ಎತ್ತರ! (3)
8. ಆ ಊರ ಹಮ್ಮೀರ, ರಾಮನ ಜೊತೆಗಾರ (3)
10. ಪೀಸು ಪೀಸಾಯಿತು ನೋಡಿ, ಚಪ್ಪಲಿ (3)
12. ನಡೆಸಿದ್ದಾಯಿತು ಸರಿ, ಮಾತಾಡುವಂತೆಯೂ ಮಾಡು (3)
13. ಆತನ ಆತಿಥ್ಯದ ದಿನ ದೂರವಿಲ್ಲ (3)
14. ಡಾಂಬರಿನ ಹಾದಿ ದಾಟಿದರೆ ನಾರಾಯಣನ ಕ್ಷೇತ್ರ (3)

### ಪದಬಂಧ 05-09-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅವನೀಶ; 3. ಪ್ರಧಾನ; 4. ಮಲೆಪು; 6. ಅನಾದರ; 8. ಆಕರ್ಷಕ; 10. ನವೋಪಾಯ; 12. ಸುಧಾಕರ; 16. ಕಡಲು; 17. 'ರುಮಾಸು' (ಸುಮಾರು ಹಿಂದು ಮುಂದು); 18. ಕುಪ್ರಸಿದ್ಧ.

ಮೇಲಿಂದ ಕೆಳಕ್ಕೆ:

1. ಅನನ್ಯ; 2. ಶಮನ; 3. ಪ್ರಸಾದ; 5. ಪುಳಕ; 6. ಅಧ್ಯಾಪನ; 7. ರತ್ನತ್ರಯ; 8. ಆಸುಪಾಸು; 9. ಕಳೇಬರ; 11. ಪಾತಕ, 13. ಧಾವಿಸು; 14. ಕುಲುಕು; 15. ವಿರುದ್ಧ.

# ಪ್ರಶ್ನಾಂಕಣ

## ಜ್ವಾಲಾಮುಖಿ-ಏನೇನು ರೂಪ?

ಜ್ವಾಲಾಮುಖಿ ಅದಕ್ಕೇ ಅಗ್ನಿಪರ್ವತ ಎಂದೂ ಹೆಸರು. ಆದರೆ ವಾಸ್ತವವಾಗಿ ಎಲ್ಲ ಜ್ವಾಲಾಮುಖಿಗಳನ್ನೂ ಅಗ್ನಿಪರ್ವತಗಳೆಂದು ಕರೆಯುವುದು ಸರಿಯಲ್ಲ. ಏಕೆಂದರೆ ಧರೆಯಲ್ಲಿ ಪ್ರಸ್ತುತ ಗುರುತಿಸಲಾಗಿರುವ ಒಟ್ಟು 1514 ಜ್ವಾಲಾಮುಖಿಗಳೆಲ್ಲವೂ ಒಂದೇ ರೂಪವನ್ನು–ಮುಗಿಲಿನೆತ್ತರದ, ಶಂಕು ರೂಪದ, ಏಕ ಶಿಖರದ ಪರ್ವತಾಕಾರವನ್ನು–ಪಡೆದಿಲ್ಲ.

ರೂಪ ಮತ್ತು ಆಕಾರಗಳನ್ನು ಆಧರಿಸಿ ಸಕಲ ಜ್ವಾಲಾಮುಖಿಗಳನ್ನೂ ಸ್ಥೂಲವಾಗಿ ನಾಲ್ಕು ವಿಧಗಳಲ್ಲಿ ವರ್ಗೀಕರಿಸಲಾಗಿದೆ: 'ಶೀಲ್ಡ್ ಅಗ್ನಿಪರ್ವತ, ಸ್ಟ್ರೈಟೋ ಅಗ್ನಿಪರ್ವತ, ಸಿಂಡರ್‌ಕೋನ್ ಅಥವಾ ಟೆಫ್ರಾ ಜ್ವಾಲಾಮುಖಿ ಮತ್ತು ರಿಫ್ಟ್ ಜ್ವಾಲಾಮುಖಿ.' ಈ ನಾಲ್ಕೂ ಪ್ರಧಾನ ವಿಧಗಳ ಜ್ವಾಲಾಮುಖಿಗಳ ರೂಪ ವೈಶಿಷ್ಟ್ಯಗಳ– ವ್ಯತ್ಯಾಸಗಳ ಸಂಕ್ಷಿಪ್ತ ಪರಿಚಯ:

* ಶೀಲ್ಡ್ ಅಗ್ನಿಪರ್ವತಗಳದು ಹೆಸರೇ ಸೂಚಿಸುವಂತೆ ಗುರಾಣಿ ಆಕಾರ. ಈ ವಿಧದ ಅಗ್ನಿ ಪರ್ವತಗಳಿಂದ ಕಡಿಮೆ ಸಾಂದ್ರತೆಯ 'ನೀರಿನಂತಹ' ಬಸಾಲ್ಟ್ ಶಿಲಾ ರಸ ಉಕ್ಕಿ ಉಕ್ಕಿ ಸುತ್ತಲೂ ಹರಿದು, ಹರಡುತ್ತದೆ, ತಣಿಯುತ್ತದೆ. ಹೀಗೆ ತುಂಬ ದೀರ್ಘಕಾಲದಲ್ಲಿ ನಿಧಾನವಾಗಿ ಬೆಳೆದು ಬೆಳೆದು, ನೂರಾರು ಕಿ.ಮೀ. ವ್ಯಾಸದ ವಿಶಾಲವೃತ್ತೀಯ ತಳದ ಮೇಲೆ ಬಹುಕಡಿಮೆ ಇಳಿಜಾರಿನ



ಅಗ್ನಿಪರ್ವತಗಳಾಗಿ ಇವು ರೂಪುಗೊಳ್ಳುತ್ತವೆ.

* ಸ್ಟ್ರೈಟೋ ಅಗ್ನಿಪರ್ವತಗಳದು ನೇರ ಸುಂದರ ಶಂಕುವಿನಾಕಾರ. ಈ ಅಗ್ನಿಪರ್ವತಗಳಿಂದ ಹೊರ ಚಿಮ್ಮುವ ಶಿಲಾಪಾಕ, ಬೂದಿ ಮತ್ತು ಬಂಡೆ ಚೂರುಗಳು ಪದರ ಪದರವಾಗಿ ಪೇರಿಸಲ್ಪಟ್ಟು ಈ ಅಗ್ನಿಪರ್ವತಗಳು ಮೈದಾಳುತ್ತವೆ. ನಿಮ್ಮ ಮಸೂರದಂತಹ ಆಕಾರದ, ಕಡಿದಾದ ಪಾರ್ಶ್ವಗಳ ಇಂಥ ಅಗ್ನಿಪರ್ವತಗಳು ಕೋಟ್ಯಂತರ ವರ್ಷ ಜೀವಂತವಾಗಿರುತ್ತವೆ.

* ಟೆಫ್ರಾ ಅಥವಾ ಸಿಂಡರ್ ಕೋನ್ ಅಗ್ನಿಪರ್ವತಗಳದು ಒಂದು ಚಿಮನಿಯ ಸುತ್ತ ಬಂಡೆ ಚೂರುಗಳನ್ನೂ ಬೂದಿ ರಾಶಿಯನ್ನೂ ಪೇರಿಸಿದಂಥ ರೂಪ. ಇವುಗಳ ಎತ್ತರ ಒಂದೆರಡು ನೂರು ಮೀಟರ್ ಅನ್ನು ಮೀರುವುದಿಲ್ಲ; ಅವುಗಳ ಆಯುಷ್ಯವೂ ಅತ್ಯಲ್ಪ.

* ರಿಫ್ಟ್ ಅಥವಾ ಫಿಶರ್ ಜ್ವಾಲಾಮುಖಿಗಳದು ನೆಲಮಟ್ಟದಲ್ಲೇ ಇದ್ದು ನೆಲದ ಬಿರುಕಿನಂತೆಯೇ ಕಾಣುವ ರೂಪ.

■ ಎನ್. ವಾಸುದೇವ್